ಮಂನವಿಗಳು

ಶ್ರೀ ಕೆ. ರಾಮಭಟ್.—ಅಧ್ಯಕ್ಷರೆ, ಉಡುಪಿಯಲ್ಲಿ ಸುಮಾರು ೨೨ ಜನ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಮೃತಪಟ್ಟಿದ್ದಾರೆ.

MR. DEPUTY SPEAKER.—We have received the notice and sent to the Government. It will be taken up.

ಶ್ರೀ ವೈ. ರಾಮಕೃಷ್ಣ —ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಮಾನ್ಯ ಹಣಕಾಸಿನ ಮಂತ್ರಿಗಳು ಹೋಗಿದ್ದಾರೆ. ಅವರು ಬಂದ ತಕ್ಷಣ ನಾವು ವಿಷಯವನ್ನು ತಿಳಿಸುತ್ತೇವೆ.

ಶ್ರೀ ಪಿ. ರಾಮದೇವ್.—ಆದರೆ, ಅಲ್ಲಿ ಈಗಾಗಲೇ ಹತ್ತಾರು ಜನ ಸತ್ತಿದ್ದಾರೆ. ಲಕ್ಷಾಂತರ ರೂಪಾಯಿ ಆಸ್ತಿಪಾಸ್ತಿಗೆ ನಷ್ಟವುಂಟಾಗಿದೆ. ಜನರು ತೊಂದರೆಪಡುತ್ತಿದ್ದಾರೆ. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಯಾವ ರೀತಿ ಪರಿಹಾರ ಕೊಡುತ್ತೀರಿ ? ನೀರಿನಲ್ಲಿ ಮುಳುಗಿ ಸತ್ತವರಿಗೆ ಏನು ಪರಿಹಾರ ಕೊಡುತಿ ೀರಾ ? ಅಲ್ಲಿನ ಡೆಪ್ಯುಟಿ ಕಮಿಷನರ್ ಏನು ಮಾಡಿದ್ದಾರೆ ? ಅದನ್ನಾದರೂ ಹೇಳಿ ? ಈ ಬಗ್ಗೆ ನಿಲುವಳಿ ಸೂಚನೆ ಕಳುಹಿಸಿದ್ದೇವೆ.

ಶ್ರೀ ಎಚ್. ಗಂಗಾಧರನ್.—ಅಲ್ಲಿ ಬಹಳ ಜನರು ಪತ್ತೆಯಿಲ್ಲವೆಂದು ಹೇಳಿಲಾಗಿದೆ.

ಶ್ರೀ ಪಿ. ರಾಮದೇವ್.—ಅಲ್ಲಿ ಜಲಪ್ರಳಯವಾಗಿದೆ. ಸಮುದ್ರ ಉಕ್ಕೇರುವುದನ್ನು ಕೇಳಿದ್ದೇವೆ. ಬರೀ ಮಳೆಗೆ ನೂರಾರು ಜನರಿಗೆ ತೊಂದರೆಯಾಗಿದೆ. ಸರ್ಕಾರದ ಯಂತ್ರ ಈ ಬಗ್ಗೆ ಏನು ಮಾಡುತ್ತಿದೆ ?

ಶ್ರೀ ಯು ಟಿ. ಫರೀದ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಮಳೆ ಸುರಿದ ಕಾರಣ ಜಿಲ್ಲೆಯಲ್ಲಿ ಮಾತ್ರವಲ್ಲ ಉಡುಪಿಯಲ್ಲಿ ಕೂಡಾ ಅನಾಹುತವಾಗಿದೆ. ಸರ್ಕಾರದ ಪರವಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಧಾವಿಸಿದ್ದಾರೆ. ನಿನ್ನೆ ೪ ಗಂಟೆಗೆ ನಾವು ಡೆಪ್ಯುಟಿ ಕಮಿಷನರ್ ಕಛೇರಿಗೆ ಫೋನ್ ಮಾಡಿ ವಿಷಯ ತಿಳಿದುಕೊಂಡಿದ್ದೇವೆ. ಅಲ್ಲಿನ ಡಿ.ಸಿ.ಯವರೂ, ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರೂ ಹಾಗೂ ಹೋಮ್‌ಗಾರ್ಡ್ಸ್ ಸ್ಥಳಕ್ಕೆ ಧಾವಿಸಿ ಬೇಕಾದ ಪರಿಹಾರ ಕ್ರಮ ಕೈಗೊಂಡಿದ್ದಾರೆ.

MR. DEPUTY SPEAKER.—As soon as the information is received it will be taken up.

SRI V. T. FAREED.—Sir, I must inform the House what happened yesterday.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುವುದಕ್ಕಿಂತ ಮುಂಚೆ ನಾನು ಒಂದು ಮಾತನ್ನು ಹೇಳುತ್ತೇನೆ. ಈ ದುರ್ಘಟನೆ ಅನಿರೀಕ್ಷಿತವಾಗಿ ನಡೆದಿದೆ. ವಿಪರೀತ ಮಳೆ ಬಂದ ಕಾರಣ ಸರಿಯಾಗಿ ಚರಂಡಿಯಲ್ಲಿ ನೀರು ಹೋಗದೇ ಡ್ರೈನೇಜ್ ಕ್ಲೋಸಾಗಿ ಈ ದುರ್ಘಟನೆ ನಡೆದಿದೆ. ಅದೂ ಕೂಡಾ ರಾತ್ರಿ ವೇಳೆಯಲ್ಲಿ ಈ ಘಟನೆ ನಡೆದಿದೆ. ಆದರಲ್ಲೂ ತಗ್ಗು ಪ್ರದೇಶದ ಹರಿಜನ, ಗಿರಿಜನರ ಮನೆಗಳು ಜಾಸ್ತಿ ಕೊಚ್ಚಿ ಹೋಗಿವೆಯೆಂದು ತಿಳಿದುಬಂದಿದೆ. ಸರ್ಕಾರ ಕೂಡಲೇ ಮಧ್ಯ ರಾತ್ರಿ ಸ್ಥಳಕ್ಕೆ ತಕ್ಷಣ ಹೊರಟು ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಅಂತೂ ಎಷ್ಟು ಜೀವ ಹಾನಿಯಾಗಿದೆ ಎಂಬುದರ ಬಗ್ಗೆ ಒಂದೊಂದು ಪತ್ರಿಕೆಯಲ್ಲಿ ಒಂದೊಂದು ರೀತಿಯಲ್ಲಿ ಬಂದಿವೆ. ೧೦ ಜೀವ ಹೋಗಿದೆಯೆಂದೂ, ೧೦ ಜೀವ ನಾಪತ್ತೆಯಾಗಿದೆಯೆಂದೂ ಹೇಳಲಾಗಿದೆ. ಈ ಬಗ್ಗೆ ಪುನರ್ವಸತಿ ಬಗ್ಗೆ ಹಾಗೂ ಪರಿಹಾರ ಕೊಡುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆಯೆಂದು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಂದೇವ್.—ಪಾಯಿಂಟ್ ಆಫ್ ಆರ್ಡರ್. ರೂಲ್ ೫೦ರ ಕೆಳಗೆ ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್‌ನ್ನು ತಮ್ಮ ಕಾರ್ಯಾಲಯದ ನೋಟೀಸ್ ಆಫೀಸಿಗೆ ೧೧ ಗಂಟೆಗೆ ಕಳುಹಿಸಿ ಕೊಟ್ಟಿದ್ದೇವೆ.

ಉಪಾಧ್ಯಕ್ಷರು.—ನಮಗೆ ಬಂದಿಲ್ಲವಲ್ಲ ; ಬೇರೆ ಕಡೆ ಕೊಟ್ಟಿರಬಹುದು.

ಶ್ರೀ ಪಿ. ರಾಂದೇವ್.—ತಮ್ಮ ನೋಟೀಸ್ ಸೆಕ್ಷನ್‌ನಲ್ಲಿಯೇ ತಪ್ಪಾಗಿರಬಹುದು.

ಶ್ರೀ ಕೆ. ರಾಮಭಟ್.—ನೋಟೀಸ್ ಕೊಟ್ಟವರಿಗೆ ಅವಕಾಶ ಬೇಡವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ರಾಂದೇವ್ ಅವರು ವಿಷಯದ ಗಾಂಭೀರ್ಯತೆಯನ್ನು ನೋಡಿ ಮಾತನಾಡಲಿ.

ಶ್ರೀ ಪಿ. ಎನ್. ರೆಡ್ಡಿ.—ಮಾನ್ಯ ಅಧ್ಯಕ್ಷರೇ, ಸಮಸ್ಯೆ ಬಹಳ ತುರ್ತು ವಿಷಯಕ್ಕೆ ಸೇರಿರುವಾಗ ಪಾಯಿಂಟ್ ಆಫ್ ಆರ್ಡರ್ ಏನಿದೆ ?

Statement by Minister

Reg. —Flood havoc in Dakshina Kannada District

SRI M. VEERAPPA MOILY (Finance Minister).—I regret to inform the House that according to reports reaching us from the Deputy Commissioner, Dakshina Kannada District and other officers, Udupi and surrounding areas in the District have been affected rather badly by flash floods. These reports indicate that due to incessant rains around Udupi town in Dakshina Kannada District since 9-6-1982 morning, floods and rain waters increased during midnight. The low-lying areas within a radius of 5 Kms in Udupi town were badly affected by floods and rain water. The houses in the low-lying areas were badly damaged and/or collapsed. The people in the low-lying areas were evacuated to safer places. Because of the collapse of houses, 11 persons have died in the following places viz.. Kalsanka, Kodavur, Thottam, Baputhota. Six dead bodies at Kalasanka, three at Kodavur and one each at Puttur and Baputhota have been recovered from the debris. It is apprehended that some more persons who are missing might have died due to drowing. Relief and feeding centres have been opened for the two hundred families rehabilitated at different centres. Medical help has been given and drugs have been distributed to the evacuated persons. According to rough estimates, about two hundred houses have been damaged and/or have collasped. About two furlong of the National Highway at Puttur village has been affected. The road between Malpe and Kalyanpur has been breached at Kodavur. The right bank of Salt Water exclusion Dam at Kodavur near Baputhota has been breacheds Store and shed with flanks have been washed away. Rescue team. of Home Guards have been brought to meet any eventuality. Boats mounted on lorries are in readiness. The estimate of the extent of damage to property can be made only after floods start receding and when the staff can take up the survey. The hailstorm was reported to be continuing unabated The Madras Engineering Group boats have been requisitioned. Teams of Home Guards, policemen, officers